**ದಿನಾಂಕಃ 30.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀಮತಿ.ಇ.ಎಮ್ ವಕೀಲರಿಂದಃ**

ಮೂಲತಃ ದಾವಾ ಸ್ವತ್ತು ನಮ್ಮ ತಾತನವರ ಹೆಸರಿಗೆ ಮಂಜೂರಾಗಿತ್ತು ( Allot). ಯಾವ ವರ್ಷದಲ್ಲಿ ಮಂಜೂರಾಗಿತ್ತು ( Allot) ಎಂದರೆ 1947 ನೇ ಇಸವಿಯ ಪೂರ್ವದಲ್ಲೆ Allot ಆಗಿತ್ತು. ನಿಮ್ಮ ತಾತನವರು ದಾವಾ ಸ್ವತ್ತನ್ನು ನೊಂದಣಿ ಮಾಡಿಸಿಕೊಂಡಿದ್ದರಾ ಎಂದರೆ ಇಲ್ಲ. ನಿಪಿ-1 ರ ಮೂಲ ಪ್ರತಿ ನಿಮ್ಮ ಬಳಿ ಇದೇಯೆ ಎಂದರೆ ಇದೆ. ಸಾಕ್ಷಿ ಮುಂದುವರೆದು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನಿಪಿ-2 ದಾಖಲೆ ಏನೂ ಎಂದರೆ list of allotments. ನಿಪಿ-2 ದಾಖಲೆಯಲ್ಲಿ ನಿಮ್ಮ ತಾತನವರ ಹೆಸರಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಅಜ್ಜಿಯವರಾದ ಜೈ ಮೇರಿ ರವರ ಹೆಸರು ಇದೆ. ನಿಮ್ಮ ತಾತನವರಿಗೆ 9 ಜನ ಮಕ್ಕಳು. ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ಮೇರಿ ವಿಲಸನ್ ಯಾರು ಎಂದರೆ ನನಗೆ ಗೊತ್ತಿಲ್ಲ. ನೀವು ಬಿ ಬಿ ಎಂ ಪಿ ಗೆ ನಮ್ಮ ತಾತನವರ ಹೆಸರಿನಲ್ಲಿ ದಾವಾ ಸ್ವತ್ತು ಹಂಚಿಕೆ (allot) ಆಗಿತ್ತು ಅದನ್ನು ನಮ್ಮ ಹೆಸರಿಗೆ ನೊಂದಣಿ ಮಾಡಿಕೊಡಿ ಎಂದು ಕೊಟ್ಟಿರುವ ಮನವಿ ಪತ್ರ ಇದೇಯೆ ಎಂದರೆ ನಾನು ಅರ್ಜಿಯನ್ನು ಕೊಟ್ಟಿದ್ದೆ ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನಿಪಿ-4 ಕ್ರಯ ಪತ್ರವನ್ನು ಬಿ ಬಿ ಎಂ ಪಿಯವರು ಮಾಡಿಕೊಟ್ಟ ನಂತರ ನೀವು ಅದರ ಬಗ್ಗೆ ವಿಚಾರಣೆ ಮಾಡಿದ್ದರಾ ಎಂದರೆ ನನಗೆ ಅದರ ಬಗ್ಗೆ ಗೊತ್ತಿರಲಿಲ್ಲ. ಸಾಕ್ಷಿ ಮುಂದುವರೆದು 2 ವರ್ಷಗಳ ನಂತರ ನನಗೆ Third party

( ಮೇರಿ ವಿಲಸನ್ ಪ್ರತಿವಾದಿ-3) ರವರಿಂದ ಬಂದ ನಂತರ ಗೊತ್ತಾಗಿತ್ತು. ನೀವು ದಾವಾ ಸ್ವತ್ತಿಗೆ ಪಲಾನುಭವಿಗಳು ಅಲ್ಲ ಆದ್ದರಿಂದ ಪ್ರತಿವಾದಿ 1 ಮತ್ತು 2 ಇಲಾಖೆರವರು ಪ್ರತಿವಾದಿ 3 ರವರ ಹೆಸರಿಗೆ ಅವರು ಪಲಾನುಭವಿಗಳಾಗಿದ್ದ ಕಾರಣ ಅವರಿಗೆ ಕ್ರಯ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1942 ರಿಂದ ದಾವಾ ಸ್ವತ್ತಿನಲ್ಲಿ ನಾವು ವಾಸವಾಗಿದ್ದೇವೆ ನಮ್ಮ ತಾತಾ ಅಜ್ಜಿ ತೀರಿಕೊಂಡ ನಂತರದಲ್ಲಿ ಅಲ್ಲೆ ವಾಸವಾಗಿದ್ದೇವೆ. ದಾವಾ ಸ್ವತ್ತಿಗೆ ಖಾತಾ, ಕಂದಾಯ ಕಟ್ಟಿದ್ದೀರಾ ಎಂದರೆ ಬಾಡಿಗೆಕಟ್ಟುತ್ತಿದ್ದೇನೆ. ಬಾಡಿಗೆ ಯಾರಿಗೆ ಕಟ್ಟುತ್ತಿದ್ದೀರಾ ಎಂದರೆ ಬಿ ಬಿ ಎಂ ಪಿ ಇಲಾಖೆಗೆ, ಆ ಸಂಬಧ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ನಮ್ಮ ವಕೀಲರ ಬಳಿ ಇದೆ . ನೀವು ಪಲಾನುಭವಿಗಳು ಅಲ್ಲದಿದ್ದರೂ ಈ ಸುಳ್ಳು ದಾವೆಯನ್ನು ಪ್ರತಿವಾದಿ 1 ಮತ್ತು 2 ಇಲಾಖೆಯವರ ಮೇಲೆ ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**(ನಿಶಾ ರಾಣಿ ಎ. ಸಿ)**
**III ನೇ ಎ.ಸಿ.ಸಿ & ಎಸ್.ಜೆ,**
**ಬೆಂಗಳೂರು.**